C.R.P.67

Form No.4 (Civil)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

S.C. No. 121/2021 ಸಿ. ಡಬ್ಲ್ಯೂ - 6 ಪಿ. ಡಬ್ಲ್ಯೂ -6

ದಿನಾಂಕ : 18.01.2024 ರಂದು ಪ್ರಮಾಣ ವಚನ ಬೋಧಿಸಲಾಗಿದೆ

| | |
|---|---|
| ಸಾಕ್ಷಿದಾರರ ಹೆಸರು | ಸಂತೋಷ್ ಜಿ. ಎಸ್. |
| ತಂದೆಯ ಹೆಸರು | ಶಿವಣ್ಣ |
| ವಯಸ್ಸು | 31 ವರ್ಷ |
| ಉದ್ಯೋಗ | ಖಾಸಗಿ ಕಂಪನಿಯಲ್ಲಿ ಕೆಲಸ |
| ವಾಸ | ಗೆಜ್ಜಲಗೆರೆ ಗ್ರಾಮ |

ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :

1. ನನಗೆ ನಮ್ಮ ಊರಿನ ಚಾಸಾ-1 ರಿಂದ 5, 7 ರಿಂದ 9 ಹಾಗೂ ಆರೋಪಿಗಳಾದ ಇಂದು ಕುಮಾರ್, ಸ್ವರೂಪ್, ಪ್ರಸಾದ್ ಗೊತ್ತು. ದಿ: 09.05.2021 ರಂದು ನಮ್ಮ ಊರಿನ ವಿಶ್ವೇಶ್ವರಯ್ಯ ಸ್ಟಾಚ್ಯು ಬಳಿ ರಾತ್ರಿ 7.00 ರಿಂದ 7.30 ರ ಸಮಯದಲ್ಲಿ ಕ್ರಿಕೆಟ್ ಟೂರ್ನಮೆಂಟ್ ವಿಚಾರದಲ್ಲಿ ನನಗೂ ಹಾಗೂ ಇಂದು ಕುಮಾರನಿಗೆ ಮಾತಿನ ಚಕಮಕಿ ಆಯಿತು. ನಮ್ಮದು ಒಂದು ಟೀಂ ಇದೆ ತೆಗೆದುಕೊಳ್ಳಿ ಎಂದು ನಾನು ಕೇಳಿದಾಗ ಆರೋಪಿ ಇಂದುಕುಮಾರ ಆಗುವುದಿಲ್ಲ ಎಂದು ಹೇಳಿದ. ಸದರಿ ವಿಚಾರದಲ್ಲಿ ನನ್ನ ಮತ್ತು ಇಂದು ಕುಮಾರನ ನಡುವೆ ಮಾತಿಗೆ ಮಾತು ಬೆಳೆಯಿತು. ಆಗ ಅಲ್ಲಿಗೆ ಸಾಕ್ಷಿ ಮೋಹನ್ ಹಾಗೂ ತಮ್ಮೇಗೌಡ ಬಂದು ಇಷ್ಟಕ್ಕೆ ಏಕೆ ಜಗಳವಾಡುತ್ತೀರಾ ಎಂದು ಹೇಳಿ ಜಗಳ ಬಿಡಿಸಿ ನಮ್ಮನ್ನು ಮನೆಗೆ ಕಳುಹಿಸಿದರು.

2. 10 ನೇ ತಾರೀಖಿನಂದು ನಾನು ಊರಿಂದ ಹೊರಗೆ ಇದ್ದಾಗ ಹೇಮಂತ್ ಮೃತಪಟ್ಟಿರುತ್ತಾನೆ ಎಂಬ ವಿಚಾರ ನನಗೆ ಗೊತ್ತಾಯಿತು.

ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ . ಸಿ ಪಿ ವಕೀಲರಿಂದ :

3. 10 ನೇ ತಾರೀಖಿನಂದು ಪಾಂಡವಪುರದಲ್ಲಿದ್ದ ನನ್ನ ಅಕ್ಕನ ಮನೆಗೆ ಹೋಗಿದ್ದೆನು. ನಮ್ಮ ಊರಿನಲ್ಲಿ ಕ್ರಿಕೆಟ್ ಟೂರ್ನಮೆಂಟ್ ಮಾಡಬೇಕು ಎಂದು ಹೇಳಿದ್ದರು, ಆದರೆ ದಿನಾಂಕ ನಿಗದಿಯಾಗಿರಲಿಲ್ಲ. 10 ನೇ ತಾರೀಖಿನಂದು ರಾತ್ರಿಯ ಸಮಯದಲ್ಲಿ ಹೇಮಂತ ಕುಮಾರನ ಸಾವಿನ

ವಿಚಾರ ನನಗೆ ಗೊತ್ತಾಯಿತು. ಕ್ರಿಕೆಟ್ ವಿಚಾರದಲ್ಲಿ ನನ್ನ ಮತ್ತು ಇಂದು ಕುಮಾರನ ನಡುವೆ ಜಗಳವಾಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಕೋವಿಡ್ ಇದ್ದುದರಿಂದ ಜನರು ಗುಂಪು ಗುಂಪಾಗಿ ಸೇರುತ್ತಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ನನ್ನ ಹೇಳಿಕೆಯಲ್ಲಿ ನಮ್ಮದು ಒಂದು ಟೀಂ ಇದೆ ತೆಗೆದುಕೊಳ್ಳಿ ಎಂದು ನಾನು ಕೇಳಿದಾಗ ಆರೋಪಿ ಇಂದುಕುಮಾರ ಆಗುವುದಿಲ್ಲ ಎಂದು ಹೇಳಿದ ಎಂಬ ವಿಚಾರವನ್ನು ನಾನು ಹೇಳಿರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ

ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.